

ಬಿಟ್ಟುಬಂದದ್ದಕ್ಕೆ ಆಗಾಗ ಮನಸ್ಸಿಗೆ ಬೇಜಾರಾಗುತ್ತಿತ್ತು. ಎಲ್ಲಕ್ಕಿಂತ ಮಿಗಿಲಾಗಿ ಒಮ್ಮೆ ದಳವಾಯಿ ಶಾಲೆ ಮತ್ತು ಹಾರ್ಡ್ವಿಕ್ ಶಾಲೆಗೆ ಫುಟ್‌ಬಾಲ್ ಮ್ಯಾಚ್ ಬಿದ್ದಿತು. ಆಗ, ನಾನು ದಳವಾಯಿ ಶಾಲೆಯ ಪರವಾಗಿ ಹಾರ್ಡ್ವಿಕ್ ಹೈಸ್ಕೂಲಿನ ವಿರುದ್ಧವಾಗಿ ಆಟ ಆಡಬೇಕಾಗಿ ಬಂದದ್ದು ಬಲು ಬೇಸರವಾದರೂ ನನ್ನ ಪಾಲಿನ ಜವಾಬ್ದಾರಿಯನ್ನು ಯಥಾನುಶಕ್ತಿ ನಿರ್ವಹಿಸಿದೆ. ಏನು ಮಾಡುವುದು? ಎದುರಾದುದನ್ನು ಎದುರಿಸಲೇಬೇಕಲ್ಲ? ಆದರೆ, ಎಂದೂ ನಾನು ಬದುಕಿನಿಂದ ವಿಮುಖನಾಗಲಿಲ್ಲ. ಬಂದದ್ದನ್ನು ಎದುರಿಸಿ ಬದುಕನ್ನು ನೀಸಬೇಕು; ಇದು ನನ್ನ ನಂಬಿಕೆ ಮತ್ತು ಅದಕ್ಕನುಗುಣವಾಗಿಯೇ ಈವರೆಗೆ ನಡೆದುಕೊಂಡು ಬಂದಿದ್ದೇನೆ. ನನ್ನ ಅನೇಕ ನಡೆಗಳಿಗೆ ಕುಕ್ಕರಹಳ್ಳಿ ಕೆರೆ ಪರೋಕ್ಷವಾಗಿ ಬೆಂಬಲ ನೀಡುತ್ತ ಬಂದಿದೆ.

ದಳವಾಯಿಯಲ್ಲಿದ್ದಾಗ ನನಗೆ ಹತ್ತಿರದ ಗೆಳೆಯರಲ್ಲೊಬ್ಬನಾಗಿದ್ದ ಸಹೃದಯಿ ಹೊಂಬಾಳೇಗೌಡ ಮತ್ತು ನಾನು ಆಗಾಗ್ಗೆ ಕುಕ್ಕರಹಳ್ಳಿ ದಡದ ಮೇಲೆ ತಿರಗಾಡಲು ಹೋಗುತ್ತಿದ್ದೆವು. ನಾವು ಅಲ್ಲಿಗೆ ಹೋಗುತ್ತಿದ್ದುದು ಸಂಜೆ ಹೊತ್ತಿನಲ್ಲಿ. ನಾವಿಬ್ಬರೂ ಹೆಚ್ಚಾಗಿ ಸ್ವಾಮಿ ವಿವೇಕಾನಂದರ ಬಗ್ಗೆ ಮಾತನಾಡುತ್ತಿದ್ದೆವು. ಕೆರೆ ಸುತ್ತಲಿನ ಮರಗಿಡಗಳ ಸೊಗಸಿನ ಜೊತೆಗೆ, ಸಂಜೆಯ ಹೊತ್ತು ತಮ್ಮ ಹೊಟ್ಟೆಗಳಿಗಾಗುವಷ್ಟು ಆಹಾರವನ್ನು ಉಂಡು, ತಮ್ಮ ಮರಿಗಳ ಧ್ಯಾನದಲ್ಲೋ ಇಲ್ಲ ಸಂಗಾತಿಗಳ ನೆನಪಿನಲ್ಲೋ ತಿರುಗಿ ವಾಪಸು ಕೆರೆಯ ಅಂಗಳದಲ್ಲಿರುವ ತಮ್ಮ ಗೂಡುಗಳಿಗೆ ಬರುವ ಬೆಳ್ಳಕ್ಕಿ ಸಾಲುಗಳನ್ನು ಎವೆಯಿಕ್ಕದೆ ನೋಡುತ್ತಾ ನಾವು ಸಂತೋಷಗೊಳ್ಳುತ್ತಿದ್ದೆವು. ಆಗ ಮಾನಸ ಗಂಗೋತ್ರಿಯಲ್ಲಿ ಕಟ್ಟಡಗಳೇನು ಅಷ್ಟಾಗಿ ಎದ್ದಿರಲಿಲ್ಲ. ಹಾಗಾಗಿ, ನಮಗೆ ಕೆರೆಯ ದಡದ ಮೇಲಿಂದ ಪಶ್ಚಿಮ ದಿಕ್ಕಿನಲ್ಲಿ ಮುಳುಗುತ್ತಿದ್ದ ಸೂರ್ಯನ ಬೃಹದಾಕಾರದ ಕೆಂಪು ಆಕೃತಿಯು ಸೆಳೆಯುತ್ತಿತ್ತು. ನಾವಿಬ್ಬರೂ ಆ ದೃಶ್ಯವನ್ನು ಅನೇಕ ಬಾರಿ ನೋಡಿ, ಚೋದ್ಯಗೊಂಡಿದ್ದೇವೆ ಎಂದಷ್ಟೆ ಹೇಳಬಹುದು. ಮುಂದೆ ನನ್ನ ಕಾಲೇಜು ಓದಿಗೂ ಕೆಲವು ಕಾಲ ಬೆಂಬಲವಾಗಿ ನಿಂತ ಹೊಂಬಾಳೇಗೌಡ ಈಗ ಬೆಂಗಳೂರು ನಿವಾಸಿಯಾಗಿದ್ದಾರೆ. ಇಲ್ಲಿನ ಇದೇ ಸೂರ್ಯಾಸ್ತಮಾನದ ಸೊಗಸಿನ ಬಗ್ಗೆ ಇಂಗ್ಲಿಷ್ ಸಣ್ಣಕಥೆಗಾರ ಆರ್.ಕೆ. ನಾರಾಯಣ್ ಮನತುಂಬಿ ವರ್ಣಿಸಿದ್ದಾರೆ. ಮಧ್ಯಾಹ್ನದ ಮೇಲೆ ಅವರು ಕುಕ್ಕರಹಳ್ಳಿ ಕೆರೆಗೆ ಬರುತ್ತಿದ್ದುದು ಸಾಮಾನ್ಯವಾಗಿತ್ತು. ತಮ್ಮ ಬರಹವನ್ನು ಮುಂದುವರೆಸಿ, ಸಂಜೆಯಲ್ಲಿ ಕೆರೆ ದಂಡೆಯ ಮೇಲಿಂದ ಕಾಣುತ್ತಿದ್ದ ಸೂರ್ಯಾಸ್ತಮಾನದ ವೈಭೋಗವನ್ನು ಕುರಿತ ಅವರ ಬರಹ ಹೀಗಿದೆ: '...ಮೈಸೂರಿನಲ್ಲಿ ಕಂಡುಬರುವ ಸೂರ್ಯಾಸ್ತಮಾನದ ಮನೋಹರ ದೃಶ್ಯವನ್ನು ನೀವು ಈ ಜಗತ್ತಿನಲ್ಲಿ ಎಲ್ಲೂ ಕಾಣಲಾರಿರಿ ಎಂದು ಜಗತ್ತಿನ ಅನೇಕ ಭೂಭಾಗಗಳನ್ನು ಸಂದರ್ಶಿಸಿರುವ ನಾನು ಆತ್ಮವಿಶ್ವಾಸದಿಂದ ಹೇಳುತ್ತಿದ್ದೇನೆ. ಸೂರ್ಯನ ಚಮತ್ಕಾರದಿಂದ ಆಕಾಶದ ಬಣ್ಣವು ಕ್ರಮೇಣ ಮಸುಕಾಗುತ್ತಾ ಬಂದು, ಮುಸ್ಸಂಜೆಯಲ್ಲಿ ಮೊಟ್ಟಮೊದಲ ನಕ್ಷತ್ರವೊಂದು ಅದೀಗ ತಾನೆ ಉದ್ಭವಿಸುತ್ತಿರುವುದನ್ನು ನಾನು ಕೆರೆ ದಂಡೆ ಮೇಲಿರುವ ಕಲ್ಲುಬೆಂಚೊಂದರ ಮೇಲೆ ಕುಳಿತು ವೀಕ್ಷಿಸಿದ್ದೇನೆ'. **(...Even today, I would assert, after having visited many parts of the world, that nowhere can you witness such masterpiece sunsets as in mysore. I would sit on a bench on the tank and watch the sun's performance,**